## ಕರೀನಾ ಸ್ತ್ರೀವಾದಿಯಲ್ಲ!

'ವೀರೆ ಡಿ ವೆಡಿಂಗ್' ಚಿತ್ರದ ಮೂವರು ನಾಯಕಿಯರಲ್ಲಿ ಕರೀನಾ ಕಪೂರ್ ಕೂಡಾ ಒಬ್ಬಳು. ಈ ಚಿತ್ರದ ಕಥೆಯೂ ಸ್ತ್ರೀವಾದದ ಸುತ್ತ ಹೆಣೆದುಕೊಂಡಿದೆ ಎನ್ನಲಾಗುತ್ತಿದೆ. ಆದರೆ ಚಿತ್ರದ ಆಡಿಯೊ ಲಾಂಚ್ ಕಾರ್ಯಕ್ರಮದಲ್ಲಿ ಕರೀನಾ ಆಡಿದ ಮಾತುಗಳು ವಿವಾದ ಉಂಟು ಮಾಡಿವೆ. 'ನಾನು ಸ್ತ್ರೀ ಮತ್ತು ಪುರುಷರ ನಡುವಣ ಸಮಾನತೆಯನ್ನು ಬಯಸುತ್ತೇನೆ. ಆದರೆ ನಾನು ಸ್ತ್ರೀವಾದಿ ಅಲ್ಲ' ಎಂದಿದ್ದಾಳೆ ಕರೀನಾ. ಆಕೆಯ ಈ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಟೀಕೆಗಳು ವ್ಯಕ್ತವಾಗಿವೆ.

'ನಾನೊಬ್ಬ ಮಹಿಳೆ, ಆದರೆ ಅದಕ್ಕಿಂತ ಮಿಗಿಲಾಗಿ ಮನುಷ್ಯಳು. ನಾನು ಕರೀನಾ ಕಪೂರ್ ಎಂದು ಹೇಳಿದಂತೆಯೇ ಸೈಫ್ ಅಲಿ ಖಾನ್‌ನ ಪತ್ನಿ ಎಂದು ಹೇಳಿಕೊಳ್ಳಲೂ ನನಗೆ ಹೆಮ್ಮೆ ಇದೆ. ನಾನು ಇರುವುದೇ ಹೀಗೆ' ಎಂದೂ ಕರೀನಾ ಮಾತು ಸೇರಿಸಿದ್ದಾಳೆ.

'ವೀರೇ ಡಿ ವೆಡಿಂಗ್' ಚಿತ್ರ ಸಹನಟಿಯರಾದ ಸೋನಂ, ಶಿಖಾ ಮತ್ತು ಸ್ವರಾ ಭಾಸ್ಕರ್ ಅವರಿಗೆ ಕರೀನಾ ಈ ಮಾತಿನ ಬಗ್ಗೆ ಸಹಮತ ಇಲ್ಲ ಎನ್ನುವುದು ಕುತೂಹಲಕರ. ಸೋನಂ ಮತ್ತು ಸ್ವರಾ ಇಬ್ಬರೂ ಪ್ರಖರ ಸ್ತ್ರೀವಾದಿಗಳಾಗಿದ್ದು, ಹಲವು ಮಹಿಳಾ ಚಳವಳಿಗಳ ಪರವಾಗಿ ಸದಾ ಗಟ್ಟಿ ಧ್ವನಿಯಲ್ಲಿ ಮಾತನಾಡುವವರು.





## ಟೈಗರ್ ಫಿಟ್‌ನೆಸ್

ಕೇಂದ್ರ ಸಚಿವ ರಾಜ್ಯವರ್ಧನ್ ಸಿಂಗ್ ಬಾಲಿವುಡ್‌ನ ನಟ ನಟಿಯರಿಗೆ ಫಿಟ್‌ನೆಟ್ ಪ್ರದರ್ಶನಕ್ಕೆ ಕರೆ ಕೊಟ್ಟಿರುವ ಬೆನ್ನಲ್ಲೇ ಒಬ್ಬೊಬ್ಬರಾಗಿ ಬಾಲಿವುಡ್ ನಟರು ಫಿಟ್‌ನೆಟ್ ಪ್ರದರ್ಶನಕ್ಕೆ ಇಳಿಯುತ್ತಿದ್ದಾರೆ. ಇತ್ತೀಚೆಗೆ ಹೃತಿಕ್ ರೋಶನ್ ಬೈಸಿಕಲ್ ತುಳಿಯುತ್ತಾ ಕಿರಿದಾದ ಜನನಿಬಿಡ ರಸ್ತೆಯಲ್ಲಿ ಸಾಹಸ ಪ್ರದರ್ಶಿಸಿದ ವೀಡಿಯೊ ಜನಪ್ರಿಯವಾಗಿದೆ. ಈ ವೀಡಿಯೊ ಬಳಿಕ ಹೃತಿಕ್, ಫಿಟ್‌ನೆಸ್ ಪ್ರದರ್ಶನ ಮಾಡುವಂತೆ ಟೈಗರ್ ಶ್ರಾಫ್‌ಗೆ ಸವಾಲು ಹಾಕಿದ್ದಾನೆ.

ಬಾಲಿವುಡ್‌ನಲ್ಲಿ ಸದ್ಯಕ್ಕೆ ಇರುವ ನಟರಲ್ಲಿ ಅತ್ಯಂತ ಫಿಟ್ ದೇಹ ಹೊಂದಿರುವಾತ ಟೈಗರ್ ಶ್ರಾಫ್. ದೇಹ ದಂಡನೆ ಮಾತ್ರವಲ್ಲ ವಿವಿಧ ಸಮರ ಕಲೆಗಳಲ್ಲೂ ನಿಷ್ಣಾತನೀತ. ಹೃತಿಕ್ ಸವಾಲಿಗೆ ಉತ್ತರಿಸಿರುವ ಟೈಗರ್ ತನ್ನ ದಯನಂದಿನ ಫಿಟ್‌ನೆಸ್ ಪ್ರದರ್ಶನಗಳನ್ನೇ ವೀಡಿಯೊ ಮಾಡಿ ಟ್ವಿಟ್ಟರ್‌ನಲ್ಲಿ ಹರಿಬಿಟ್ಟಿದ್ದಾನೆ. ಮಾತ್ರವಲ್ಲ, ತನ್ನ ಫಿಟ್‌ನೆಸ್ ಕಸರತ್ತುಗಳನ್ನು ಪ್ರದರ್ಶಿಸುವಂತೆ ಸೋನಂ ಕಪೂರ್, ಕರಣ್ ಜೋಹರ್ ಮತ್ತು ಫರ್ಹಾನ್ ಅಖ್ತರ್ ಅವರಿಗೆ ಸವಾಲು ಹಾಕಿದ್ದಾನೆ.

ಫಿಟ್‌ನೆಸ್ ಬಗ್ಗೆ ಟೈಗರ್ ಶ್ರಾಫ್ ಹೇಳಿರುವುದು ಕುತೂಹಲ ಕೆರಳಿಸುವಂತಿದೆ. 'ಸಾಂಪ್ರದಾಯಿಕ ಜಿಮ್ ಶೈಲಿ ನನ್ನದಲ್ಲ. ಡ್ಯಾನ್ಸ್, ಸಮರಕಲೆ ಮತ್ತು ಸಂಗೀತದ ಜೊತೆಗಿನ ವೇಗದ ಹೊಂದಾಣಿಕೆ ನನ್ನ ಫಿಟ್‌ನೆಸ್‌ನ ಫಿಲಾಸಫಿ. ಈ ಸೂತ್ರವನ್ನು ಯುವಕರು ಮಾತ್ರವಲ್ಲ, ಹಿರಿಯರೂ ಅನುಸರಿಸಬಹುದು' ಎಂದಿದ್ದಾನೆ ಆತ.

ಸದ್ಯಕ್ಕೆ ಟೈಗರ್ ಶ್ರಾಫ್, 'ಸ್ಟೂಡೆಂಟ್ ಆಫ್ ದಿ ಇಯರ್ 2' ಚಿತ್ರದಲ್ಲಿ ಬ್ಯುಸಿ. ಅನನ್ಯ ಪಾಂಡೆ ಮತ್ತು ತಾರಾ ಸುತಾರಿಯಾ ನಟಿಸುತ್ತಿರುವ ಈ ಚಿತ್ರವನ್ನು ಪುನೀತ್ ಮಲ್ಹೋತ್ರಾ ನಿರ್ದೇಶಿಸುತ್ತಿದ್ದಾರೆ. ನವೆಂಬರ್ ಕೊನೆಯ ಹೊತ್ತಿಗೆ ಚಿತ್ರ ತೆರೆಗೆ ಬರುವ ಸೂಚನೆಗಳಿವೆ.

■ ಬಿಂದು